



ಹೊಡೆಸಿಕೊಳ್ಳುವುದೂ, ಒದೆಸಿಕೊಳ್ಳುವುದೂ ಕಲಿಕೆಯ ಭಾಗವಾಗಿತ್ತು. ಇದರಿಂದ ಸ್ನಾಯುಗಳು ಬಲಪಡುತ್ತವೆ ಎನ್ನುವುದು ಕರಾಟೆ ಕ್ರಮ. ಬೆಳಿಗ್ಗೆ ಆರು ಗಂಟೆಗೆ ಶುರುವಾಗುತ್ತಿದ್ದ ಆ ಶಾಲೆಯಲ್ಲಿ ಕೆಲವೊಮ್ಮೆ ದೂರದಿಂದ ಬರುವ ಹುಡುಗರು ತಡವಾಗಿ ಬರುತ್ತಿದ್ದರು. ಮಾಸ್ಟರ್ ತಡವಾಗಿ ಬಂದ ಹುಡುಗರಿಗೆ ನಾನು ಬರುವ ಮೊದಲು ಯಾವ ಶಿಕ್ಷೆ ಕೊಡುತ್ತಿದ್ದರೋ ಏನೋ? ನಾನು ಬಂದ ಮೇಲೆ ಹೊಸ ಕ್ರಮ ಶುರು ಮಾಡಿದರು.

ತಡವಾಗಿ ಬರುವ ಹುಡುಗರನ್ನು ಮಂಡಿಯೂರಿಸಿ ಸಾಲಾಗಿ ಕೂರಿಸಿ, ನನ್ನ ಕರೆದು ಎಲ್ಲರ ಹೊಟ್ಟೆಗೂ ಒದೆಯಲು ಹೇಳುತ್ತಿದ್ದರು. ಇದು ನನಗೆ ಪೀಕಲಾಟಕ್ಕಿಟ್ಟುಕೊಂಡಿತು. ಅಷ್ಟು ಜನ ಹುಡುಗರ ಮಧ್ಯೆ ಕರಾಟೆ ಕಲಿಯುವ ಒಬ್ಬಳೇ ಹುಡುಗಿಗೆ ತೊಂದರೆ ಕೊಡದೇ ಸಭ್ಯರಾಗಿ ನಡೆದುಕೊಳ್ಳುತ್ತಿದ್ದ ಹುಡುಗರಿಗೆ ವಿನಾಕಾರಣ ಒದೆಯುವುದೆಂತು? ಆದರೆ ಮಾಸ್ಟರ್ ಮಾತು ಕೇಳಲೇಬೇಕಲ್ಲ? ಗಾಳಿಯಲ್ಲಿ ಜೋರಾಗಿ ಒದೆಯುವ ಕಾಲುಗಳು ಹುಡುಗರ ಹೊಟ್ಟೆಯನ್ನು ಆದಷ್ಟು ಮೆತ್ತಗೆ ಒದೆಯುತ್ತಿದ್ದವು. ಮಾಸ್ಟರ್ ಇದನ್ನು ತಿಳಿಯದವರೇನಲ್ಲ, ಕೂಡಲೇ ನನ್ನನ್ನು ಮಂಡಿಯೂರಿ ಕೂರಲು ಹೇಳಿದರು. ಅಲ್ಲಿದ್ದ ಎಂಟ್ಹತ್ತು ವರ್ಷದ ಹುಡುಗನನ್ನು ಕರೆದು ನನ್ನ ಹೊಟ್ಟೆಗೆ ಜೋರಾಗಿ ಒದೆಯಲು ಹೇಳಿದರು. ಆ ಹುಡುಗ ಗುರುವಾಜ್ಞೆಯನ್ನು ಶಿರಸಾವಹಿಸಿ ಪಾಲಿಸಿದನು. ಒಂದೇ ಒದೆತಕ್ಕೆ ಹಿಂದಕ್ಕೆ ಬಿದ್ದೆ. ಆದರೆ ಕರಾಟೆ ಕಲಿಯುವುದರಿಂದ ಹಿಂದಕ್ಕೆ ಸರಿಯಲಿಲ್ಲ. ಇದಾದ ನಂತರ ನಾನು ಇಕ್ಕಟ್ಟಿಗೆ ಸಿಲುಕದಂತೆ ಎಲ್ಲಾ ಹುಡುಗರು ಸರಿಯಾದ ಸಮಯಕ್ಕೆ ಬರುವುದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು.

ಹೀಗೇ ಒಮ್ಮೆ ಕರಾಟೆಗೆಂದು ಬೆಳಗಿನ ಜಾವ ಸ್ಕೂಟಿಯಲ್ಲಿ ಹೋಗುವಾಗ ಹಿಂದಿನಿಂದ ಬಂದ ಬೈಕ್ ಗುದ್ದಿ ನಾನು ಹಾರಿ ಲಾರಿಯೊಂದರ ಮುಂದಿನ ಚಕ್ರದ ಎದುರು ಬಿದ್ದೆ. ತಕ್ಷಣ ಲಾರಿ ಚಾಲಕ ಬ್ರೇಕ್ ಹಾಕಿದ್ದರಿಂದ ಅನಾಹುತ ಆಗದೇ ಹೋದರೂ ನನ್ನ ಬೆಳ್ಳನೆ ಕರಾಟೆ ದಿರಿಸು ಅಲ್ಲಲ್ಲಿ ಕೆಂಪಾಯಿತು. ಮನೆಗೆ ಬಂದ ನಂತರ ಗಾಯಗಳನ್ನು ನೋಡಿದ ಅಪ್ಪ ನೀನು ಬೆಳಿಗ್ಗೆ ಹೊತ್ತು ದ್ವಿಚಕ್ರ ವಾಹನ ಓಡಿಸುವುದು ಬೇಡ ಎಂದು ತಾಕೀತು ಮಾಡಿದರು. ಆದರೆ ಕರಾಟೆಯಿಂದ ಹಿಂದೆ ಸರಿಯಲಿಚ್ಛಿಸದೆ, ಎರಡು ವಾರಗಳಲ್ಲಿ ಕಾರು ಚಲಾಯಿಸಲು ಕಲಿತು, ಕರಾಟೆ ಶಾಲೆಗೆ ಕಾರಿನಲ್ಲಿ ಹೋಗಲು ಶುರು ಮಾಡಿದೆ.

ವಾರಕ್ಕೆ ಮೂರು ದಿನ ಮಾತ್ರ ಶಾಲೆ ಇರುತ್ತಿದ್ದರಿಂದ ಬರೀ ಕರಾಟೆ ಶಾಲೆಗೆ ಹೋದರೆ ಸಾಲದು, ಇನ್ನು ಹೆಚ್ಚು ಕಸರತ್ತು ಮಾಡಿ ಶಕ್ತಿ ಪಡೆಯಬೇಕೆಂದು ಅಲ್ಲಿನ ಹುಡುಗರ ಮಾತಿನಿಂದ ತಿಳಿಯಿತು. ಕರಾಟೆ ಶಾಲೆಯಲ್ಲಿ ಉತ್ತಮ ಕರಾಟೆಪಟು ಎನಿಸಿದ್ದ, ಮನೆ ಹತ್ತಿರದ ದರ್ಶಿನಿಯೊಂದರಲ್ಲಿ ರೊಟ್ಟಿ ಮಾಡುತ್ತಿದ್ದ ಸುರೇಂದ್ರ ಎಂಬ ಹುಡುಗನನ್ನು ಕರೆದುಕೊಂಡು ಕರಾಟೆ ಇಲ್ಲದ ದಿನಗಳಲ್ಲಿ ಬೆಳಿಗ್ಗೆಯೇ ಪಾರ್ಕಿಗೆ ಹೋಗಿ ಕಸರತ್ತು ಮಾಡಬಹುದೆಂದುಕೊಂಡೆ. ನಾನೊಬ್ಬಳೇ ಹುಡುಗನ ಜೊತೆ ಪಾರ್ಕಿಗೆ ಹೋಗುವುದು ಹೇಗೆ? ಪಕ್ಕದ ಮನೆಯಲ್ಲಿದ್ದ ಶಿಲ್ಪಾ ಎಂಬ ನನ್ನ ಗೆಳತಿಗೆ ಕರಾಟೆ ಹಾಗೂ ದೈಹಿಕ ಶಕ್ತಿಯ ಪ್ರಯೋಜನಗಳನ್ನು ಮನವರಿಕೆ ಮಾಡಿದೆ. ಪಾರ್ಕಿಗೆ ಬಂದು ಕಸರತ್ತು ಮಾಡಲು ಅವಳು ಒಪ್ಪಿದರೂ, ತೀರಾ ಸಂಪ್ರದಾಯಸ್ಥ ಮನೆಯವಳಾದ್ದರಿಂದ ಅವಳ ಅಪ್ಪ ಅಮ್ಮನನ್ನು ಒಪ್ಪಿಸುವ ಜವಾಬ್ದಾರಿ ನನಗೇ ವಹಿಸಿದಳು. ಸರಿ, ಅವರಿಗೂ ಕರಾಟೆಯ ಪ್ರಯೋಜನ ವಿವರಿಸಿ, ಕರಾಟೆ ಶಾಲೆಯಲ್ಲಿ ಹೇಳಿಕೊಡುವುದನ್ನು ನಾನೇ ಸ್ವತಃ ಕಲಿಸುವುದಾಗಿ ಹೇಳಿ ಒಪ್ಪಿಸಿದೆ. ಪಾರ್ಕಿನಲ್ಲಿ ಬೆಳಗಿನ ಹಕ್ಕಿಗಳ ಚಿಲಿಪಿಲಿಯೊಂದಿಗೆ ನಮ್ಮ ಮೂವರ ಹ್ಹು ಹ್ಹು ಹ್ಹು ಕೂಡಾ ಸೇರಿಕೊಂಡಿತು.

ಆರು ತಿಂಗಳು ಕಲಿಯುವಷ್ಟರಲ್ಲಿ ಕರಾಟೆ ನನಗೆ ಹುಚ್ಚು ಹಿಡಿಸಿತ್ತು. ಎಲ್ಲಿ ಕೂತರೂ ನಿಂತರೂ ಹ್ಹು ಹ್ಹು ಎಂದು ಕೈ ಕಾಲು ಗುದ್ದುವಂತಾಗುತ್ತಿತ್ತು. ಕಾಲೇಜಿನ ಗೆಳತಿಯರೊಂದಿಗೆ ಕರಾಟೆ ಜೀವನಕ್ಕೆ ತುಂಬಾ ಮುಖ್ಯ ಎಂದು ಹೇಳತೊಡಗಿದೆ. ಬಿಡುವಿನ ಸಮಯದಲ್ಲಿ ಅವರಿಗೂ ಹ್ಹು ಹ್ಹು ಹೇಳಿಕೊಡುತ್ತಿದ್ದೆ. ಒದೆಯುವುದು ಹೇಗೆ, ಅದರಿಂದ ತಪ್ಪಿಸಿಕೊಳ್ಳುವುದು ಹೇಗೆ ಅಂತ ಕರಾಟೆಯ ಅಖಾಡಕ್ಕೆ ಅವರನ್ನೂ ಇಳಿಸಲು ಪ್ರಯತ್ನಿಸುತ್ತಿದ್ದೆ. ಹೀಗೆ ಒಮ್ಮೆ ಹೇಳಿಕೊಡುವಾಗ ಗೆಳತಿ ಯಶೋದಾ ನನ್ನ ಒದೆತ ತಪ್ಪಿಸಿಕೊಳ್ಳುವುದರಲ್ಲಿ ಸೋತು ಸ್ವಲ್ಪ ಹೆಚ್ಚೇ ಪೆಟ್ಟಾಯಿತು. ಪೆಟ್ಟು ಬಿದ್ದಲ್ಲಿ ರಕ್ತ ಹೆಪ್ಪುಗಟ್ಟಿದಂತಾಗಿದ್ದು ನೋಡಿ ನನ್ನ ಎಲ್ಲಾ ಗೆಳತಿಯರು 'ಉಚಿತ ಕರಾಟೆ ತರಬೇತಿ ಶಾಲೆ'ಗೆ ಬರುವುದನ್ನು ನಿಲ್ಲಿಸಿಬಿಟ್ಟರು. ಗೆಳತಿಯರ ಬಳಗದಲ್ಲಿ ಕರಾಟೆಗೆ ಜೋಡಿ ಸಿಗದೇ ಕರಾಟೆಯ ಹುಚ್ಚಿನಿಂದ ನನ್ನ ಕೈ ಕಾಲುಗಳು ಸದಾ ಗುದ್ದಲು ಹವಣಿಸುವಂತಾಯಿತು.



ಹೀಗೆ ಒಮ್ಮೆ ನಮ್ಮ ದೊಡ್ಡಮ್ಮನ ಮನೆಗೆ ಹೋಗಿದ್ದೆ. ಕರಾಟೆಗೆ ಕೈಗಳು ಕಡಿಯಲು ಶುರುವಾಯಿತು. ನಮ್ಮ ದೊಡ್ಡಪ್ಪನವರನ್ನು (ದೇವನೂರು ಮಹಾದೇವ) ಕೇಳಿದೆ: 'ಅಂಕಲ್, ನನಗೆ ಗುದ್ದಲು ತುಂಬಾ ಆಸೆ ಆಗುತ್ತಿದೆ. ನಿಮಗೆ ಎಲ್ಲಿ ಹೊಡೆದರೆ ನೋವಾಗುವುದಿಲ್ಲ ಎಂದು ಹೇಳಿ. ಅಲ್ಲಿಗೆ ಹೊಡೆಯುತ್ತೇನೆ'. ಅವರು 'ಹಾಗಾದರೆ ನೀನು ಗೋಡೆಗೆ ಗುದ್ದು' ಎಂದು ಸಲಹೆ ನೀಡಿದರು.

ನನ್ನ ಸಮಬಲದ ಎದುರಾಳಿ ಯಾರಾದರೂ ಸಿಕ್ಕರೆ ಗುದ್ದಾಡಲು ಚೆನ್ನಾಗಿತ್ತು ಎಂದು ಹಪಹಪಿಸುತ್ತಿರುವಾಗ ಅಪ್ಪ ನನ್ನ ಮದುವೆ ನಿಶ್ಚಯ ಮಾಡಿದರು. ಸಾಮಾನ್ಯವಾಗಿ ಎಂಜಿನಿಯರಿಂಗ್ ಓದಿರುವ ಹುಡುಗಿಯರಿಗೆ ವಿದೇಶದ ಹುಡುಗನನ್ನು ಜೋಡಿಯಾಗಿಸುತ್ತಿದ್ದ ಕಾಲದಲ್ಲಿ, ನನ್ನ ಸ್ವಭಾವಕ್ಕನುಗುಣವಾಗಿ, ನಮ್ಮ ಅಪ್ಪ ನಮ್ಮ ಊರಿನ ಪಕ್ಕದ ಹಳ್ಳಿಯ, ತಕ್ಕಮಟ್ಟಿಗಿನ ಒಳ್ಳೆಯ ಉದ್ಯೋಗದಲ್ಲಿದ್ದ ಹುಡುಗನನ್ನು ಹುಡುಕಿದ್ದು, ನನಗೆ ಬೇಡ ಎನ್ನಲು ಕಾರಣವೇ ಇರಲಿಲ್ಲ.

ಹುಡುಗನನ್ನು ಭೇಟಿಯಾದ ಸಮಯ. ನನ್ನ ಮೊದಲ ಪ್ರಶ್ನೆ; 'ನಿಮಗೆ ರಾಜ್‌ಕುಮಾರ್ ಇಷ್ಟಾನಾ?'. 'ಓಹ್, ತುಂಬಾ ಇಷ್ಟ' ಎಂದರು. ಮುಂದಿನ ಪ್ರಶ್ನೆ 'ನಿಮಗೆ ಕರಾಟೆ ಬರುತ್ತಾ?' ಎಂದು ಕೇಳಿದೆ. 'ಇಲ್ಲ' ಎಂದರು. ನಾನು 'ನನಗೆ ಕರಾಟೆ ತುಂಬಾ ಇಷ್ಟ. ಕಲಿಯುತ್ತಿದ್ದೇನೆ' ಎಂದೆ. ಅವರ ಮುಖದಲ್ಲಿ ಸಣ್ಣ ಭಯ ನನಗೆ ನಗು ತರಿಸಿತು. ನಮ್ಮ ಕರಾಟೆ ಶಾಲೆಯ ಪ್ರಸಂಗಗಳೂ, ನಾವು ಮೂವರು ಬೆಳಿಗ್ಗೆ ದೇಹ ದಂಡನೆ ಮಾಡಿ ದೈಹಿಕಬಲ ಗಳಿಸುತ್ತಿರುವುದೂ ಹೇಳಿದೆ. 'ಹೌದೇ? ಹಾಗಾದರೆ ನನಗಿಂತ ನೀವು ಬಲಶಾಲಿ?' ಎಂದರು. 'ಹೌದು! ಬೇಕಾದರೆ **arm wrestling** ಮಾಡಿ ನೋಡಿ' ಎಂದು ಆಹ್ವಾನಿಸಿದೆ. ಕಾಲೇಜಿನಲ್ಲಿ ಬರೀ ಹುಡುಗಿಯರೊಂದಿಗೆ ಗೆದ್ದು ಈಗ ಮನೆಯವರ ಒಪ್ಪಿಗೆ ಇರುವ ಹುಡುಗನ ಜೊತೆ ಆಡಿ ಗೆದ್ದರೆ ನನ್ನ ಸಾಮ್ರಾಜ್ಯ ವಿಸ್ತರಣೆ ಆದಂತೆನಿಸಿತು.

ಸರಿ, ಯುದ್ಧ ಶುರುವಾಯಿತು. ಬಲಾಬಲದ ಪೈಪೋಟಿ ನಂತರ ನಾನೇ ಗೆದ್ದೆ! ಕರಾಟೆ ಕಸರತ್ತು ಫಲ ನೀಡಿತೆಂದು ಬೀಗಿದೆ. 'ಮತ್ತೆ ಆಡ್ತೀರಾ?' ಎಂದು ಆಹ್ವಾನಿಸಿದೆ. 'ಹೂ' ಎಂದರು. ಪುನಃ ಸೋತರು. ಮದುವೆ ಆದಮೇಲೆ ಗಂಡನನ್ನು ಕುಸ್ತಿಯಲ್ಲಿ ಮಣಿಸಬಹುದು ಅಂತ ಹಿಗ್ಗಿಹೋದೆ.

ಮತ್ತೆರಡು ಭೇಟಿಯಾಯಿತು. ಪರಿಚಯ ಪ್ರೇಮಕ್ಕೆ ತಿರುಗಿತ್ತು. ಮದುವೆಗೆ ಕೆಲವೇ ದಿನ ಬಾಕಿ. ವರನ ಕಡೆಯ ಬೇಡಿಕೆ ಬಂತು. 'ನೀನು ಕರಾಟೆ ಬಿಡುವೆಯಾ?'. ನಾನು 'ಇಲ್ಲಪ್ಪ. ನಾನು ಶಕ್ತಿಶಾಲಿ ಅಂತ ಭಯಾನ?' ಎಂದೆ. ಈಗ ಸತ್ಯ ಹೊರಬಂತು. 'ನಾನು **arm wrestling** ಸೋತಿದ್ದು ಸುಮ್ಮನೆ, ನಿನ್ನೊಂದಿಗೆ ಆಡುವ ಖುಷಿಗೆ ಅಷ್ಟೇ. ಈಗ ನನ್ನೊಂದಿಗೆ ಆಡಿ ಗೆಲ್ಲು ನೋಡೋಣ' ಎಂದರು. ಸರಿ, ಮತ್ತೆ ಯುದ್ಧ ಶುರುವಾಯಿತು. ಒಂದೇ ಕ್ಷಣಕ್ಕೆ ಸೋತೆ. ಬಲೂನಿನ ಗಾಳಿ ಪುಸ್ಸೆಂದಂತೆ ಆಯ್ತು. ಮತ್ತೆ ಕೇಳಿದರು 'ಕರಾಟೆ ಬಿಡುವೆಯಾ?'.

ಅಷ್ಟು ಹೊತ್ತಿಗೆ ಕರಾಟೆ ಹುಚ್ಚು ಇಳಿದು ಸಂಸಾರಕ್ಕಿಳಿಯುವ ಹೊಸತು ಸೆಳೆತ ನನ್ನನ್ನು 'ಹೂ' ಎನ್ನುವಂತೆ ಮಾಡಿತು. ಮದುವೆಯಾದ ಮೂರನೇ ದಿನಕ್ಕೆ ಉದ್ಯೋಗ ನಿಮಿತ್ತ ಶಿಡ್ಲಘಟ್ಟದಲ್ಲಿ ಸಂಸಾರ ಹೂಡಬೇಕಾಗಿ ಬಂದು ಕರಾಟೆಗಿಂತಲೂ ಕ್ಲಿಷ್ಟ ಎನಿಸಿದ ಅಡುಗೆ, ಸಂಸಾರ ನಿರ್ವಹಣೆ ಕಲಿಯಬೇಕಾಯಿತು. ದೈಹಿಕವಾಗಿ ಬಲಾಢ್ಯರಾಗಿದ್ದರೇ ಗೆಲುವು ಎನ್ನುವುದಾಗಿದ್ದಲ್ಲಿ ಬಹುತೇಕ ಎಲ್ಲಾ ಪ್ರಾಣಿಗಳೂ ಮಾನವನಿಗಿಂತ ಮೇಲ್ಮಟ್ಟದಲ್ಲಿರಬೇಕಾಗಿತ್ತು. ಹಾಗಾಗಿ ಆರೋಗ್ಯ, ಬೌದ್ಧಿಕ ಸಾಮರ್ಥ್ಯ ಹಾಗೂ ವಿವೇಚನೆಗೆ ಹೆಚ್ಚು ಗೆಲುವು ಎಂಬ ಸಿದ್ಧಾಂತ ಸ್ವೀಕರಿಸಿ ಕರಾಟೆ ಹುಚ್ಚಿನಿಂದ ದೂರವಾದರೂ, ಒಂದಲ್ಲ ಒಂದು ಹುಚ್ಚು ಸದಾ ನನ್ನೊಳಗೆ ಜೀವಂತವಾಗಿರುತ್ತದೆ. ಈಗ ನನ್ನ ಎಲ್ಲಾ ಹುಚ್ಚಿಗೂ ಯಜಮಾನರ 'ಜೊತೆ ಇದೆ' ಎನ್ನುವುದೇ ಬದಲಾವಣೆ. ■

